ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಪರೀಕ್ಷಾ ವಿಭಾಗ
ಜ್ಞಾನ ಗಂಗಾ ಕಲಬುರಗಿ - 585 106, ಕರ್ನಾಟಕ, ಭಾರತ.
ದೂರವಾಣಿ ಸಂಖ್ಯೆ: 08472-263203 ಫ್ಯಾಕ್ಸ್ : 08472-263207
ಇ-ಮೇಲ್: **regegug@rediffmail.com**

ಸಂಖ್ಯೆ/ಗುವಿಕ/ಪರೀಕ್ಷಾ/2018-19/106 ದಿನಾಂಕ: 4-6-2018

## ಸುತ್ತೋಲೆ

**ವಿಷಯ: 6ನೇ ಜೂನ್ 2018ರಿಂದ ಜರುಗುವ ಎರಡನೇ/ ನಾಲ್ಕನೇ /ಆರನೇ ಸೆಮಿಸ್ಟರ್ ಸ್ನಾತಕ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವನ್ನು ಯುಜಿಸಿ ವೇತನ ಮತ್ತು ರಾಜ್ಯ ವೇತನ ಶ್ರೇಣಿ ಪಡೆಯುತ್ತಿರುವ ಅಧ್ಯಾಪಕರು ಕಡ್ಡಾಯವಾಗಿ ನಿರ್ವಹಿಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ವ್ಯಾಪ್ತಿಯಲ್ಲಿ ಬರುವ ಕಲಬುರಗಿ, ಬೀದರ್, ಯಾದಗೀರ್ ಮತ್ತು ರಾಯಚೂರು ಜಿಲ್ಲೆಗಳ ಎಲ್ಲಾ ಪದವಿ ಮಹಾವಿದ್ಯಾಲಯಗಳ ಅಧ್ಯಾಪಕರಿಗೆ ಈ ಮೂಲಕ ತಿಳಿಸುವುದೇನಂದರೆ, ಆಯಾ ಮಹಾವಿದ್ಯಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ದಿನಾಂಕ 6ನೇ ಜೂನ್ 2018ರಿಂದ ಜರುಗುವ ಎರಡನೇ/ ನಾಲ್ಕನೇ /ಆರನೇ ಸೆಮಿಸ್ಟರ್ ಸ್ನಾತಕ ಪರೀಕ್ಷೆಗಳ ಮೌಲ್ಯಮಾಪನ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸಬೇಕೆಂದು ಸೂಚಿಸಲಾಗಿದೆ. ಇದುವರೆಗೆ ಬೇರೆ ಬೇರೆ ಕಾರಣಗಳನ್ನು ನೀಡಿ, ಕಾರ್ಯ ನಿರ್ವಹಿಸದೇ ಇರುವ ಅಧ್ಯಾಪಕರ ಬಗ್ಗೆ ವಿಶ್ವವಿದ್ಯಾಲಯವು ಗಂಭೀರವಾಗಿ ಪರಿಗಣಿಸಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಎಲ್ಲಾ ಪರೀಕ್ಷಾ ಕಾರ್ಯಗಳಲ್ಲಿ ಹಾಗೂ ಮೌಲ್ಯಮಾಪನವನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ತಿಳಿಸಲಾಗಿದೆ. ಒಂದು ವೇಳೆ ಪರೀಕ್ಷಾ ಕಾರ್ಯಗಳು ಹಾಗೂ ಮೌಲ್ಯಮಾಪನದಿಂದ ಹೊರಗುಳಿದ ಅಂತಹ ಅಧ್ಯಾಪಕರುಗಳ ಮೇಲೆ ನಿಯಮಾನುಸಾರ ಕಟ್ಟುನಿಟ್ಟಿನ ಕ್ರಮ ಕೈಗಳ್ಳಲಾಗುವುದು.

4/6

ಕುಲಸಚಿವರು (ಮೌಲ್ಯಮಾಪನ)
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಗೆ,
ಗುಲಬರ್ಗಾ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಮಾನ್ಯ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಕಲಬುರಗಿ.
2. ಅಧ್ಯಕ್ಷರು, ಗುಲಬರ್ಗಾ ವಿಶ್ವವಿದ್ಯಾಲಯ ಕಾಲೇಜು ಅಧ್ಯಾಪಕರ ಸಂಘ.
3. ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಗು.ವಿ.ಕಲಬುರಗಿ.